# ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

**ಸಿ.ಸಿ. 42/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 8**

**ದಿನಾಂಕಃ** 04.08.2026 **ಸಿಡಬ್ಲ್ಯೂ 9**

| | |
|---|---|
| ಹೆಸರು | ರಮೇಶ |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ಶಿವಮೊಗ್ಗ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 04.07.2023 ರಂದು ನಮ್ಮ ಕಂಪನಿಯಿಂದ ಹುಬ್ಬಳ್ಳಿಯಲ್ಲಿ ಮೀಟಿಂಗ್ ಇದ್ದು ನಾನು ಶಿವಮೊಗ್ಗದಿಂದ ಹರಿಹರಕ್ಕೆ ಕೆ ಎಸ್ ಆರ್ ಟಿ ಸಿ ಬಸ್ ನಲ್ಲಿ ಬರುತ್ತಿದ್ದೆನು. ಹರಿಹರದ ಹೆದ್ದಾರಿಯಲ್ಲಿ ಲಾರಿಗೆ ಮತ್ತು ಬಸ್ ಗೆ ಅಪಘಾತವಾಗಿರುತ್ತದೆ. ನನಗೆ ಮೊಣಕೈಗೆ, ಮೂಗಿಗೆ, ಎದೆರೆ ಹೊಡೆತ ಬಿದ್ದಿರುತ್ತದೆ. ನನ್ನ ಜೊತೆ ಚಂದ್ರಶೇಖರ ನನ್ನ ಸಹೋದ್ಯೋಗಿ ಇಬ್ಬರು ಅವರಿಗೆ ಕೈಗೆ ಹೊಡೆತ ಬಿದ್ದು ರಕ್ತ ಬಂದಿರುತ್ತದೆ. ಬಸನಲ್ಲಿದ್ದ ಪ್ರಯಾಣಿಕರಿಗೂ ಸಹ ಗಾಯಗಳಾಗಿರುತ್ತವೆ. ನಂತರ ನಾನು ಹರಿಹರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಶಿವಮೊಗ್ಗಕ್ಕೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಬಸನಲ್ಲಿ ಕುಳಿತುಕೊಂಡಾಗ ಲಾರಿ ವೇಗವಾಗಿ ಬಂದು ಬಸಗೆ ಡಿಕ್ಕಿ ಪಡಿಸಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ03.07.2023 ರಂದು ಶಿವಮೊಗ್ಗದಿಂದ ಹೊನ್ನಾಳಿ ಮಾರ್ಗವಾಗಿ ಹರಿಹರ ಶಿವಮೊಗ್ಗ ರಸ್ತೆ ಹನಿ ಗಾರ್ಡನ ಡಾಬಾ ಹೋಟೆಲ್ ಮುಂಭಾಗ ಬಸ್ ಚಾಲಕನು ತನ್ನ ಬಸನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಎದುರಿಗೆ ಒಂದು ಲಾರಿ ಬರುತ್ತಿದ್ದು ಸದರಿ ಲಾರಿಯ ಚಾಲಕನು ತನ್ನ ಲಾರಿಯನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬಸ್ ಗೆ ಮುಖಾಮುಖಿ ಡಿಕ್ಕಿ ಆಗಿರುತ್ತದೆ ಎಂದರೆ ಸರಿ. ಬಸ್ ನಂ.ಕೆಎ –09 ಎಫ್–5465 ಇದ್ದು ಚಾಲಕನ ಹೆಸರು ಬಸನಗೌಡ ವಿರೂಪಾಕ್ಷಗೌಡ ಮೈಸೂರ್ ಅಂತ ಇತ್ತು ಎಂದರೆ ಸರಿ. ಲಾರಿಯ ನಂ.ಕೆಎ–14 ಎ–8673 ಇತ್ತು. ಲಾರಿ ಚಾಲಕನ ಹೆಸರು ಮೊಹಮದ್ ಖಾನ್ ಹಬೀದ್ ಖಾನ್ , ಮಲೆಬೆನ್ನೂರು ಅಂತ ಇತ್ತು ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎ ವಿ ಎಂ ವಕೀಲರಿಂದಃ

ಬಸನಲ್ಲಿ ಸಾಕಷ್ಟು ಜನರು ಇದ್ದರು ಎಂದರೆ ಸರಿ. ನಾನು ಮುಂದುಗಡೆಯಿಂದ 3 ನೇ ಸೀಟಿನಲ್ಲಿ ಕುಳಿತುಕೊಂಡಿದ್ದೆನು. ಬಸ್‌ನ ಮುಂದುಗಡೆ ಏನು ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಅಪಘಾತ ಬಸ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಅಪಘಾತ ತಪ್ಪಿಸಲು ಬಸ್ ಚಾಲಕನು ಸಾಕಷ್ಟು ಪ್ರಯತ್ನ ಪಟ್ಟಿರುತ್ತಾನೆ ಎಂದರೆ ಸರಿ. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ಈ ವಿಚಾರವಾಗಿ ನನಗೆ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿತನನ್ನು ಇಂದೇ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.